# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ

## 2009 - 2010 ನೇ ಸಾಲಿನ ವಾರ್ಷಿಕ ವರದಿ.

**ಚಿಕ್ಕಮಗಳೂರು ನಗಾರಭಿವೃದ್ಧಿ ಪ್ರಾಧಿಕಾರದ 2009 - 2010 ನೇ ಸಾಲಿನ**
**01-04-2008 ರಿಂದ 31-03-2009 ಮತ್ತು 01-04-2009 ರಿಂದ 31-12-2009 ರವರೆಗಿನ**

## :.:.: ವಾರ್ಷಿಕ ವರದಿ :.:.:

**1. 2009 - 2010 ನೇ ಸಾಲಿನ ಆಯವ್ಯಯ ಅಂದಾಜು ಮತ್ತು ಅದಕ್ಕನುಗುಣವಾಗಿ ವೆಚ್ಚ**

| ಆದಾಯ | ಖರ್ಚು |
|---|---|
| ರೂ. 6,22,14,092=00 | ರೂ. 6,08,78,000=00 |

**01-04-2008 ರಿಂದ 31-03-2009 ರವರೆಗಿನ ಆದಾಯ ಮತ್ತು ಖರ್ಚಿನ ವಿವರ**

| ಆದಾಯ | ಖರ್ಚು |
|---|---|
| ರೂ. 1,79,14,334=00 | ರೂ. 1,13,03,110=00 |

**2. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ ( ಡಿ. ಸಿ. ಬಿ.)**

**–ಇಲ್ಲಾ–**

**3. 01-04-2008 ರಿಂದ 31-03-2009 ರವರೆಗಿನ ಪ್ರಗತಿಯ ವರದಿ**

**ಈ ಮುಂದಿನಂತೆ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ.**

1. ಕುರುವಂಗಿ ರಸ್ತೆ ಎಸ್ಎಸ್ಡ್ರೈನ್ ನಿರ್ಮಾಣ.
2. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ಪಾರ್ಕಿನ ಪಶ್ಚಿಮ ಭಾಗದಲ್ಲಿ ಕುರುವಂಗಿ ರಸ್ತೆ ಚಪ್ಪಡಿ ಚರಂಡಿ ನಿರ್ಮಾಣ.
3. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ನಿವೇಶನ ಸಂಖ್ಯೆ ಡಿ–198 ರಿಂದ ಇ–359 ರವರೆಗೆ ಚಪ್ಪಡಿ ಚರಂಡಿ ನಿರ್ಮಾಣ.
4. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ಎ– 45 / 1 ರಿಂದ ಬಿ– 244 ರವರೆಗೆ ಚಪ್ಪಡಿ ಚರಂಡಿ ನಿರ್ಮಾಣ.
5. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ಸಿ– 198 / 1 ರಿಂದ ಬಿ– 141 ರವರೆಗೆ ಚಪ್ಪಡಿ ಚರಂಡಿ ನಿರ್ಮಾಣ.
6. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ಕುರುವಂಗಿ ರಸ್ತೆಗೆ ಅಭಿಮುಖವಾಗಿ ಸಿ– 89 / 1 ಆರ್. ಸಿ. ಸಿ. ಹೆಚ್. ಪಿ. ಕಲ್ವರ್ಟ್ ನಿರ್ಮಾಣ.
7. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದಲ್ಲಿ ಬಿ– 151 ರಿಂದ ಡಿ– 195 ಸೈಜುಕಲ್ಲು ಚಪ್ಪಡಿ ಚರಂಡಿ ನಿರ್ಮಾಣ.

**ಪುಟ –2– ಕ್ಕೆ**

8. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ಕುರುವಂಗಿ ರಸ್ತೆಗೆ ಅಭಿಮುಖವಾಗಿ ಹ್ಯೋಮ್, ಪೈಪ್, ಕಲ್ವರ್ಟ್ ನಿರ್ಮಾಣ.
9. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 1, 2, 3, 4 ನೇ ಹಂತದ ರಸ್ತೆ ಬರ್ಮ್ ತೆಗೆದು, ಜೆಲ್ಲಿ ಎದ್ದಿರುವ ರಸ್ತೆಗೆ ಗ್ರಾವಲ್ ಹರಡಿ ರಸ್ತೆ ಅಭಿವೃದ್ಧಿ ಕಾಮಗಾರಿ.
10. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ಕುರುವಂಗಿ ರಸ್ತೆಯ ಪಕ್ಕದಲ್ಲಿನ ಉದ್ಯಾನವನಕ್ಕೆ ತಂತಿ ಬೇಲಿ ಹಾಕುವುದು.
11. ಹಿರೇಮಗಳೂರು ವಸತಿ ಬಡಾವಣೆ 1 ನೇ ಹಂತದಲ್ಲಿ ಡಿ–29 ರಿಂದ ಡಿ–32 ರವರೆಗೆ ಚಪ್ಪಡಿ ಚರಂಡಿ ನಿರ್ಮಾಣ.
12. ಆಯುಕ್ತರ ನಿವಾಸಕ್ಕೆ ಬಣ್ಣ ಬಳಿದು, ಕಾಂಪೌಂಡ್ ಗೋಡೆ ದುರಸ್ಥಿ.
13. ಕುರುವಂಗಿ ರಸ್ತೆ ಪಕ್ಕದಲ್ಲಿನ ಉದ್ಯಾನವಕ್ಕೆ ತಂತಿ ಬೇಲಿ ಹಾಕುವುದು.
14. ಹಿರೇಮಗಳೂರು ವಸತಿ ಬಡಾವಣೆ 3 ನೇ ಹಂತ 18.00 ಮೀಟರ್ ರಸ್ತೆ ಪಕ್ಕ ಉದ್ಯಾನವನಕ್ಕೆ ತಂತಿ ಬೇಲಿ ಹಾಕುವುದು.
15. ಹಿರೇಮಗಳೂರು ವಸತಿ ಬಡಾವಣೆ (ಆಶ್ರಯ) ಉದ್ಯಾನವನಕ್ಕೆ ತಂತಿಬೇಲಿ ಹಾಕುವುದು.
16. ಹಿರೇಮಗಳೂರು ವಸತಿ ಬಡಾವಣೆ 4 ನೇ ಹಂತದ ಕುರುವಂಗಿ ರಸ್ತೆಗೆ ಅಭಿಮುಖವಾಗಿ ಹ್ಯೂಮ್ ಪೈಪ್ ಕಲ್ವರ್ಟ್ ನಿರ್ಮಾಣ.

**ಆರ್ಥಿಕ ಪ್ರಗತಿಯ ವಿವರಗಳು**

| | |
|---|---|
| 1. ರಸ್ತೆ ಮತ್ತು ಮೋರಿ ನಿರ್ಮಾಣಕ್ಕೆ | 7,31,611=00 |
| 2. ಚರಂಡಿ ನಿರ್ಮಾಣಕ್ಕೆ | 13,16,322=00 |
| 3. ಪಾರ್ಕ್‌ಗಳಿಗೆ (ಉದ್ಯಾನವನಗಳಿಗೆ) ತಂತಿ ಬೇಲಿ | 2,40,186=00 |
| 4. ಆಯುಕ್ತರ ವಸತಿ ಗೃಹ ದುರಸ್ಥಿ | 59,368=00 |
| **ಒಟ್ಟು** | **23,47,487=00** |

**01-04-2009 ರಿಂದ 31-12-2009 ರವರೆಗಿನ ಪ್ರಗತಿಯ ವರದಿ.**

| | | |
|---|---|---|
| 1. | ಆಯುಕ್ತರು ನಿವಾಸದ ಮೇಲ್ಛಾವಣಿಗೆ ವೆದರ್‌ಪ್ರೂಫ್ (course) ಚುರುಕಿ ಹಾಕುವುದು | 59368=00. |
| 2. | ಕಛೇರಿಯ ಅಲ್ಯೂಮಿನಿಯಂ ಮತ್ತು ಗ್ಲಾಸ್ ಪಾರ್ಟೀಷನ್ ವಾಲ್ ನಿರ್ಮಾಣ | 69000=00. |
| 3. | ನಾಗರೀಕ ಸೌಲಭ್ಯ ನಿವೇಶನದ ಬಾಬ್ತು ಹೆಚ್ಚುವರಿ ಪಾವತಿಸಿದ್ದ ನಿವೇಶನ ಶುಲ್ಕ ಮರುಪಾವತಿ | 257526=00. |
| 4. | ಜಮೀನು ಪರಿಹಾರ ಬಾಬ್ತು ಠೇವಣಿ ಮಾಡಿರುವುದು | 2913573=00. |
| 5. | ಅಕ್ರಮ ಸಕ್ರಮ ದಂಡ ಶುಲ್ಕ ಮರುಪಾವತಿ | 104331=00. |
| 6. | ಇಎಂಡಿ ಮತ್ತು ಎಫ್‌ಎಸ್‌ಡಿ ಮರುಪಾವತಿ | 1280385=00. |
| 7. | ವಿದ್ಯುತ್ ದುರಸ್ಥಿ ಮತ್ತು ನಿರ್ವಹಣೆ ಬಾಬ್ತು. | 216747=00. |
| 8. | ಬಸ್ ಶೆಲ್ಟರ್‌ಗಳಿಗೆ ಫ್ಲೆಕ್ಸ್‌ಬೋರ್ಡ್ ಅಳವಡಿಕೆ | 24000=00. |
| | **ಒಟ್ಟು** | **49,42,930=00.** |

**ಪುಟ – 3 – ಕ್ಕೆ**

## 4. ತೆಗೆದುಕೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳು:-

1. ತೇಗೂರು ಗ್ರಾಮದ ಸರ್ವೆ ನಂ. 110 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 110 ಎಕರೆ ಜಮೀನಿನಲ್ಲಿ ಹೊಸದಾಗಿ ನಿವೇಶನ ಯೋಜನೆ ರೂಪಿಸಲು ಕರ್ನಾಟಕ ನಗರಾಬಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 5(1) (ಬಿ) ರ ಅನ್ವಯ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

2. ಉಪ್ಪಳ್ಳಿ ಗ್ರಾಮದ ಸರ್ವೆ ನಂ. 19, 20, 21 ಮತ್ತು ಇಂದಾವರ ಗ್ರಾಮದ ಸರ್ವೆ ನಂ. 34 ಮತ್ತಿತರೆ ಸರ್ವೆ ನಂಬರ್‌ಗಳಲ್ಲಿನ ಸುಮಾರು 200 ಎಕರೆ ಜಮೀನಿನಲ್ಲಿ ಹೊಸದಾಗಿ ನಿವೇಶನ ಯೋಜನೆ ರೂಪಿಸುವ ಸಲುವಾಗಿ ಭೂಸ್ವಾಧೀನ ಪ್ರಕ್ರಿಯೆ ಕಾರ್ಯ ಪ್ರಗತಿಯಲ್ಲಿರುತ್ತದೆ.

## 5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳ ಪ್ರಗತಿ.

ಇದು ಪ್ರಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮ-1991 ರ, ಅನ್ವಯ ನಿವೇಶನ ಹಂಚಿಕೆ ಸಮಯದಲ್ಲಿ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಿಯಾಯಿತಿ ದರದಲ್ಲಿ ನಿವೇಶನ ಹಂಚಿಕೆ ಮಾಡಿ ನಿಯಮದಂತೆ ಮೀಸಲಿಡಲಾಗುವುದು.

## 6. ವಿಶೇಷ ಘಟಕ ಯೋಜನೆ : ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು.

ಇದು ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ,

## 7. ಕೇಂದ್ರ ಪುರಸ್ಕೃತ : ವಿದೇಶಿ ನೆರವಿನ ಯೋಜನೆಗಳ ವಿವರಗಳು

ಪ್ರಾದಿಕಾರಕ್ಕೆ ಕೇಂದ್ರದಿಂದ ಪುರಸ್ಕೃತ ಯೋಜನೆ ಇರುವುದಿಲ್ಲ ಹಾಗೂ ಯಾವುದೇ ಯೋಜನೆಗಳಿಗೆ ಕೇಂದ್ರದ ನೆರವು ದೊರಕಿರುವುದಿಲ್ಲ.

## 8. ಇತರೆ ಯೋಜನೆಗಳ ವಿವರಗಳು

1. ಚಿಕ್ಕಮಗಳೂರು ನಗರದ ಮಹಾ ಯೋಜನಾ (ಪರಿಷ್ಕೃತ) ಯೋಜನೆಯ ನಕ್ಷೆಗೆ ಸರ್ಕಾರದಿಂದ ಆದೇಶ ಸಂಖ್ಯೆ.ನಅಇ : 773 : ಮೈಅಪ್ರಾ : 2008 : ಬೆಂಗಳೂರು, ದಿನಾಂಕ: 31-12-2008 ರಲ್ಲಿ ತಾತ್ಕಾಲಿಕ ಅನುಮೋದನೆ ದೊರಕಿದ್ದು, ಈ ಬಗ್ಗೆ ಸಾರ್ವಜನಿಕರಿಂದ ಪುನಃ ಸಲಹೆ ಸೂಚನೆ ಆಕ್ಷೇಪಣೆಗಳನ್ನು ಸ್ವೀಕರಿಸಿದ್ದು, ನಿಯಮಾನುಸಾರ ಸಿಡಿಪಿ ನಕ್ಷೆಯಲ್ಲಿ ಅಳವಡಿಸಿ ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿ ಕೊಡಲಾಗಿದೆ.

ಪುಟ 4 ಕ್ಕೆ

# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 01-01-2009 ರಿಂದ 31-03-2010 ರವರೆಗೆ ತೆಗೆದುಕೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಯೋಜನೆಗಳ ವಿವರ:

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಒಟ್ಟು ಮೂರು ಬಸ್ ಶೆಲ್ಟರ್‌ಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದ್ದು, ತಲಾ ಒಂದು ಬಸ್ ಶೆಲ್ಟರ್ ನಿರ್ಮಾಣಕ್ಕೆ ರೂ. 2.00 ಲಕ್ಷಗಳಂತೆ ಒಟ್ಟು 6.00 ಲಕ್ಷ ರೂಪಾಯಿಗಳ ವೆಚ್ಚವಾಗುತ್ತದೆ. ಈಗಾಗಲೇ ಅಂದಾಜು ಪಟ್ಟಿ ತಯಾರಿಸಿದ್ದು ಟೆಂಡರ್ ಮೂಲಕ ಕಾಮಗಾರಿ ವಹಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

2. ಆಯುಕ್ತರ ಕಛೇರಿ ಕೊಠಡಿಗೆ ಶೌಚಾಲಯ ನಿರ್ಮಾಣದ ಕಾಮಗಾರಿಗೆ ಈಗಾಗಲೇ 65,000=00 ರೂಪಾಯಿಗಳಿಗೆ ಅಂದಾಜು ಪಟ್ಟಿ ತಯಾರಿಸಿದ್ದು, ನಿಯಮಾನುಸಾರ ಕಾಮಗಾರಿ ಕೈಗೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

3. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯ 2 ನೇ ಹಂತದ ನಿವೇಶನಗಳನ್ನು ಭೂಮಿಯ ಮೇಲೆ ಗುರುತು ಮಾಡುವ ಕಾಮಗಾರಿಯನ್ನು ಟೆಂಡರ್ ಮೂಲಕ 1.08 ಲಕ್ಷ ರೂಪಾಯಿಗಳಿಗೆ ವಹಿಸಿದ್ದು; ಸದರಿ ಕೆಲಸವು ಈಗಾಗಲೇ ಪೂರ್ಣಗೊಂಡಿದ್ದು, ಬಿಲ್ಲು ಪಾವತಿ ಬಾಕಿ ಇರುತ್ತದೆ.

4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ಕಲ್ಯಾಣನಗರ ಹೆಚ್ಚುವರಿ ವಸತಿ ಬಡಾವಣೆಯಲ್ಲಿ ರೂ. 28.76 ಲಕ್ಷಗಳ ವೆಚ್ಚದಲ್ಲಿ ಚಪ್ಪಡಿ ಚರಂಡಿ ನಿರ್ಮಾಣ ಕಾಮಗರಿ, ರೂ. 64.06 ಲಕ್ಷಗಳ ವೆಚ್ಚದಲ್ಲಿ ಸೈಜು ಕಲ್ಲು ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ, ರೂ. ರೂ.35.30 ಲಕ್ಷಗಳ ವೆಚ್ಚದಲ್ಲಿ ಆರ್.ಸಿ.ಸಿ. ಡೆಕ್ ಸ್ಲ್ಯಾಬ್ ಮೋರಿ ಮತ್ತು ಆರ್. ಸಿ. ಸಿ. ಹ್ಯೂಮ್ ಪೈಪ್ ಮೋರಿ ನಿರ್ಮಾಣದ ಕಾಮಗಾರಿ ಮತ್ತು ರೂ 50.20 ಲಕ್ಷಗಳ ವೆಚ್ಚದಲ್ಲಿ ಜಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಟೆಂಡರ್ ಮೂಲಕ ವಹಿಸಿ ಕೊಡಲಾಗಿದ್ದು, ಸದರಿ ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತವೆ.

**ಆಯುಕ್ತರು**
**ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ**
**ಚಿಕ್ಕಮಗಳೂರು.**

ವಾರ್ಷಿಕವರದಿಕನ್ನಡ೨೦೦೮-೦೯.